ಆಂತರ್ಯದ ಸಿರಿತನ ಕೇವಲ ತಾತ್ವಿಕ ಪ್ರಶ್ನೆಯಲ್ಲ. ಅದು ಮನುಷ್ಯನ ಮನಸ್ಸು ವಸ್ತುನಿಷ್ಠ ಸತ್ಯಕ್ಕೆ ಸಮಂಜಸವಾಗಿ ಸ್ಪಂದಿಸಲು ಬೇಕಾದ ಮನಸ್ಸಿನ ಆರೋಗ್ಯದ ಪ್ರಶ್ನೆ. ಮನಸ್ಸು ಗ್ರಹಿಸುವ ಮತ್ತು ಗ್ರಹಿಸಿದ್ದನ್ನು ಪೂರ್ವಗ್ರಹಗಳ ಪ್ರಭಾವವಿಲ್ಲದೆ ವಸ್ತುನಿಷ್ಠವಾಗಿ ಅರ್ಥೈಸುವ ಸಾಮರ್ಥ್ಯವನ್ನು ನಾವು ಮನಸ್ಸಿನ ಆರೋಗ್ಯ ಎನ್ನಬಹುದು. ಆದರೆ ನಮ್ಮ ನಂಬಿಕೆಯ ಜಗತ್ತು ವಾಸ್ತವಕ್ಕಿಂತ ಎಷ್ಟು ಭಿನ್ನವಾಗಿದೆ ಎಂದರೆ ಅದು ನಮ್ಮ ಗ್ರಹಣಶಕ್ತಿಯನ್ನು ಮತ್ತು ಗ್ರಹಿಸಿದ್ದನ್ನು ಅರ್ಥೈಸುವುದನ್ನು ವಸ್ತುನಿಷ್ಠ ಸತ್ಯಗಳಿಂದ ದೂರಮಾಡಿ ಅಸಮಂಜಸತೆಯನ್ನು ಉಂಟುಮಾಡುತ್ತದೆ. ಚಾರಿತ್ರಿಕವಾಗಿ ಇದಕ್ಕೆ ನಮ್ಮ ದೇಶದಲ್ಲಿ ಹಾಸುಹೊಕ್ಕಾಗಿರುವ ಸಂಸ್ಕೃತಿಯೇ ಕಾರಣ ಎಂದು ಹೇಳಬಹುದು. ವಾಸ್ತವಕ್ಕಿಂತ ಅಲೌಕಿಕಕ್ಕೆ ಹೆಚ್ಚು ಒತ್ತು ಕೊಟ್ಟ ನಮ್ಮ ಸಂಸ್ಕೃತಿ ಹಲವಾರು ವಿಫಲತೆಗಳಿಗೆ ದಾರಿಮಾಡಿಕೊಟ್ಟಿತು. ನಿರಂತರವಾದ ವಿಫಲತೆಗಳಿಂದ ದುರ್ಬಲವಾದ ಮನಸ್ಸು ತನ್ನ ಸಾಂಸ್ಕೃತಿಕ ಪರಿಸರದ ಆರೋಗ್ಯಕರ ಅಂಶಗಳಿಂದ ಪುಷ್ಟಿಗೊಳ್ಳುವ ಬದಲು, ತನ್ನ ದೌರ್ಬಲ್ಯಗಳಿಗೆ ಅನುಗುಣವಾದ ಅವಾಸ್ತವ ಅಂಶಗಳನ್ನು ಆಯ್ದು ತನ್ನ ವ್ಯಕ್ತಿತ್ವದ ಭಾಗವಾಗಿ ಜೋಡಿಸಿಕೊಳ್ಳುತ್ತದೆ. ಹೀಗೆ ಬಾಹ್ಯ ಬಡತನವು ಆಂತರ್ಯದ ಬಡತನಕ್ಕೆ ಕಾರಣವಾಗಿ, ಈ ಎರಡೂ ಪರಸ್ಪರ ಪೂರಕವಾಗಿ ಬಡತನದ ವಿಷವರ್ತುಲವನ್ನು ಸೃಷ್ಟಿಸುತ್ತದೆ.

ನಮ್ಮ ಇಂದಿನ ಉದ್ಯೋಗಾವಕಾಶ–ಉತ್ಪಾದನೆಗಳನ್ನು ಗಮನಿಸಿದರೆ ಬಡತನದ ರಹಸ್ಯ ತಿಳಿಯುತ್ತದೆ. ಇಂದು ಭಾರತದಲ್ಲಿ ಅಸಂಖ್ಯಾತ ಉದ್ಯೋಗಾವಕಾಶಗಳಿವೆ. ಆದರೆ ಈ ಉದ್ಯೋಗಕ್ಕೆ ಯೋಗ್ಯವಾದ, ಎಂದರೆ ಕೆಲಸ ನಿರ್ವಹಿಸಬಲ್ಲ ಕೌಶಲಗಳಿರುವ ಜನ ಬಹಳ ಕಡಮೆ. ಬಹುತೇಕ ಸಂದರ್ಭಗಳಲ್ಲಿ ಬಡತನದ ಬೇಗೆ ಮನುಷ್ಯನ ಕಲಿಕಾಸಾಮರ್ಥ್ಯವನ್ನೇ ಕಸಿದುಕೊಂಡುಬಿಡುತ್ತದೆ. ವಸ್ತುನಿಷ್ಠವಾದ ಸರಳ ಸಂಬಂಧಗಳನ್ನೂ ಗುರುತಿಸಲು ಅಂಥ ಜನರು ವಿಫಲರಾಗುತ್ತಾರೆ; ಹಾಗಾಗಿ ಸದಾ ಸೋಲನ್ನು ಅನುಭವಿಸುತ್ತಾರೆ. ಅನುಕಂಪಹೀನ ಸಾಮಾಜಿಕ ಒತ್ತಡಗಳ ನಡುವೆ ಹಸಿವು ನಿರಾಶೆಗಳು ಅವರ ಮನಸ್ಸನ್ನು ದುರ್ಬಲಗೊಳಿಸುತ್ತವೆ. ಹಾಗಾಗಿ ಜನ ಪೂರ್ವಜನ್ಮದ ಕರ್ಮಫಲ ಅಥವಾ ವಿಧಿವಾದಕ್ಕೆ ಶರಣಾಗುತ್ತಾರೆ. ಇಂತಹ ಮನಃಸ್ಥಿತಿಯಲ್ಲಿ ಹುಟ್ಟುವ ಬಡವರ 'ತಾಳ್ಮೆ', ಔದಾರ್ಯ ಅಥವಾ ಸಹಿಷ್ಣುತೆಗಳಿಗೆ ಸಂಬಂಧಿಸಿದ್ದಲ್ಲ. ಬದಲಾಗಿ ಅದು ಕ್ರಿಯಾಶೀಲತೆ ಸಾಧ್ಯವಾಗದ ನಿಸ್ಸಹಾಯಕ ಮನಃಸ್ಥಿತಿ.

ಬೆಳವಣಿಗೆಯ ಮೊದಲ ಹಂತಗಳಲ್ಲಿ ಮಗುವಿನ ಮನಸ್ಸಿನ ಮೇಲೆ ಬಡತನವು ತೀಕ್ಷ್ಣ ಪ್ರಭಾವಗಳನ್ನು ಬೀರುತ್ತದೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಪೋಷಕರು ಒದಗಿಸುವ ಅನುಸರಣೀಯ ಮಾದರಿಗಳು ಮಗುವಿನ ಮನಸ್ಸನ್ನು ರೂಪಿಸುತ್ತವೆ. ಯಾವ ವ್ಯಕ್ತಿತ್ವಗಳು ಮಗುವಿನ ಎಳೆಯ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೊ ಅದೇ ತೆರನಾದ ವ್ಯಕ್ತಿತ್ವವನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಬದುಕಿನ ಮೂಲಭೂತ ಆವಶ್ಯಕತೆಗಳಿಂದ ಹಿಡಿದು, ಮನಸ್ಸು ಬಯಸುವ ಕನಿಷ್ಠ ಮನೋರಂಜನೆಯವರೆಗೆ ಎಲ್ಲವೂ 'ಕೊರತೆ'ಗಳೇ ಆದರೆ ಅದರಿಂದ ಹುಟ್ಟುವ ಮನಸ್ಸಿನ ಸ್ವರೂಪವನ್ನು ಊಹಿಸುವುದು ಕಷ್ಟಸಾಧ್ಯವೇನಲ್ಲ.

'ಕೊರತೆ'ಯ ಪ್ರಭಾವದಲ್ಲಿ ರೂಪುಗೊಂಡ ಕೆಲವು ಕ್ರಿಯಾಶೀಲ ಮನಸ್ಸುಗಳು ಸ್ವಾರ್ಥವನ್ನು ಬೆಳೆಸಿಕೊಳ್ಳುತ್ತವೆ. ಏಕೆಂದರೆ ಈ ಕೊರತೆ ಎಂಬುದು ಬಾಹ್ಯವಸ್ತುಗಳಿಗೆ ಸಂಬಂಧಪಟ್ಟು ಹುಟ್ಟಿದ ಅನುಭವವಾದರೂ ಎಳೆಯ ವಯಸ್ಸಿನಲ್ಲಿ ಈ ಅನುಭವ ಮನಸ್ಸಿನ ರಚನಾತ್ಮಕ ಭಾಗವಾಗಿ ಸೇರಿಕೊಳ್ಳುವುದರಿಂದ ಜೀವನ ಪರ್ಯಂತ ವ್ಯಕ್ತಿತ್ವದ ಭಾಗವಾಗಿ ಉಳಿದುಕೊಂಡುಬಿಡುತ್ತದೆ. ಇಂತಹ ವ್ಯಕ್ತಿಗಳು ಭವಿಷ್ಯದ ಜೀವನದಲ್ಲಿ ಸಾಕಷ್ಟು ಸಂಪಾದಿಸಿದರೂ, ಮನಸ್ಸಿನ ಒಳಗೆ ಮನೆಮಾಡಿರುವ ಆ ಕೊರತೆ ಇವರಿಗೆ ತೃಪ್ತಿ ತಂದುಕೊಡುವುದೇ ಇಲ್ಲ. ಆ ಕೊರತೆಯೇ ಇವರನ್ನು ಮತ್ತಷ್ಟು ಸ್ವಾರ್ಥಕ್ಕೆ ಪ್ರಚೋದಿಸುತ್ತದೆ. ಈ ಬಗೆಯ ಅಂತರಂಗದ ಬಡತನವನ್ನು ಬಾಹ್ಯ ಶ್ರೀಮಂತಿಕೆ ಪರಿಹರಿಸಲಾರದು. ಇವರು ಸದಾ ಅಸಂತೃಪ್ತರಾಗಿ ವಸ್ತು ಸಂಗ್ರಹಣೆಯಲ್ಲೇ ನಿರತರಾಗಿರುತ್ತಾರೆ. ಇದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ. ಬಡ ಹಿನ್ನೆಲೆಯಿಂದ ಬಂದ ಹಲವಾರು ಸರ್ಕಾರಿ ನೌಕರರು, ಉದ್ಯೋಗಿಗಳು, ರಾಜಕಾರಣಿಗಳು ಭ್ರಷ್ಟಾಚಾರಿಗಳಾಗಿ ಪರಿಣಮಿಸುವುದು ಇದೇ ಕಾರಣಕ್ಕಾಗಿ.

**ಹೀಗೆ ಬಾಹ್ಯಬಡತನ ವಿಷವೃತ್ತದಂತೆ ಅಂತರಂಗದ ಬಡತನಕ್ಕೆ ಕಾರಣವಾಗುತ್ತದೆ. ಅಂತರಂಗದ ಬಡತನ ಸ್ವಾರ್ಥಿಗಳನ್ನು ಸೃಷ್ಟಿಸುತ್ತದೆ. ಸ್ವಾರ್ಥಿಗಳಿಂದ ತುಂಬಿದ ಪ್ರಪಂಚ ಅಸಮಾನತೆಯನ್ನು ಸೃಷ್ಟಿಸುತ್ತದೆ. ಅಸಮಾನತೆ ಎಂಬುದು ಚರಿತ್ರೆಯ ಎಲ್ಲ ಘಟ್ಟಗಳಲ್ಲೂ, ಈ ಭೂಗೋಲದ ಎಲ್ಲ ಭಾಗಗಳಲ್ಲೂ ಕಂಡುಬರುವ ಸಂಗತಿ. ಇದನ್ನು ಪ್ರಕೃತಿಸಹಜವಾದ ವಿದ್ಯಮಾನ ಎನ್ನಬೇಕೋ ಅಥವಾ ಸ್ವಾರ್ಥಿಯಾದ ಮಾನವನ ಸ್ವಯಂಕೃತ ಅಪರಾಧ ಎನ್ನಬೇಕೋ ತಿಳಿಯದು. ಆದರೆ ಭಾರತದಂಥ ಬೃಹತ್ ರಾಷ್ಟ್ರದ ಕಡುಬಡತನವನ್ನು ಸ್ವಯಂಕೃತ ಅಪರಾಧವೆಂದೇ ಕರೆಯಬೇಕು.**

ಬಡತನ ಮತ್ತು ಅಸಮಾನತೆಗಳು ಕೆಲವೊಮ್ಮೆ ಮನುಷ್ಯರನ್ನು ಆತ್ಮವಿಮರ್ಶೆಗೆ ಹಚ್ಚುತ್ತವೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತದೆ. ಅವರು ಹೀಗೆ ಹೇಳುತ್ತಿದ್ದರು: "ನಾನು ಸುಖದ ಸ್ಥಿತಿಯಲ್ಲಿ ಕಲಿತದ್ದಕ್ಕಿಂತ ದುಃಖದ ಸ್ಥಿತಿಯಲ್ಲಿ ಹೆಚ್ಚು ಕಲಿತಿದ್ದೇನೆ." ಇದೇ ಸಂದರ್ಭದಲ್ಲಿ ಪ್ರಸಿದ್ಧ ಜರ್ಮನ್ ತತ್ತ್ವಶಾಸ್ತ್ರಜ್ಞ ಕ್ಯಾಂಟ್‌ನ ಹೇಳಿಕೆಯನ್ನು ಗಮನಿಸಬಹುದು: "Inequality among men (is) a rich source of much that is evil, but also of everything that is good" (ಮಾನವರ ನಡುವಿನ ವೈಪರೀತ್ಯವು ಕೆಡುಕಿನ ಬಹುಭಾಗದ ಆಕರವಾಗಿರುವಷ್ಟೇ, ಸಮಗ್ರ ಒಳಿತಿನ ಮೂಲವೂ ಆಗಿದೆ). ವೈರುಧ್ಯಗಳ ನಡುವೆ ಮನಸ್ಸು ಹೆಚ್ಚು ಸಂವೇದನಾಶೀಲವಾಗುತ್ತದೆ ಎಂಬ ಅರಿವಿನೊಂದಿಗೆ ನಾವು ಈ ಮಾತನ್ನು ಅರ್ಥಮಾಡಿಕೊಳ್ಳಬಹುದು. ಕಠೋಪನಿಷತ್ತಿನ ಶ್ರೇಯಸ್ಸು–ಪ್ರೇಯಸ್ಸುಗಳು ಈ ವಿದ್ಯಮಾನಕ್ಕೆ ಸಂಬಂಧಪಟ್ಟವು. ಶ್ರೇಯಸ್ಸು ಅಂತರಂಗದ ಶ್ರೀಮಂತಿಕೆಗೆ ಸಂಬಂಧಪಟ್ಟುದಾದರೆ, ಪ್ರೇಯಸ್ಸು ಬಾಹ್ಯ ಶ್ರೀಮಂತಿಕೆಗೆ ಸಂಬಂಧಪಟ್ಟದ್ದು. ವಿವೇಕಿಯಾದವನು ಅಂತರಂಗದ ಶ್ರೀಮಂತಿಕೆ ತಂದುಕೊಡುವ ಮನಸ್ಸಿನ ಎಚ್ಚರವನ್ನು ಬಯಸುತ್ತಾನೆ. ಅನೇಕವೇಳೆ ಬಾಹ್ಯ ಸಮೃದ್ಧಿ ಈ ಎಚ್ಚರವನ್ನು

ಕಡಮೆ ಮಾಡಬಹುದು. ಈ ಎಚ್ಚರವನ್ನು ಸಂಪಾದಿಸಲು ಅಂಥ ಮಹಾನ್‌ವ್ಯಕ್ತಿ ಯಾವ ತ್ಯಾಗಕ್ಕಾದರೂ ಸಿದ್ಧನಾಗುತ್ತಾನೆ.

ಈ ಸಂದರ್ಭದಲ್ಲಿ ಸೂಫಿ ಸಂತನ ಕಥೆಯೊಂದು ನೆನಪಿಗೆ ಬರುತ್ತದೆ. ಸೂಫಿ ಸಂತನೊಬ್ಬ ಮರದ ಕೆಳಗೆ ಕುಳಿತು ತನ್ನ ಮುರುಕುಪಾತ್ರೆಯಿಂದ ಗಂಜಿ ಕುಡಿಯುತ್ತಿದ್ದ. ಈ ಸಂದರ್ಭದಲ್ಲಿ ಆ ದೇಶದ ಮಂತ್ರಿ ಕುದುರೆ ಮೇಲೆ ಠಾಕುಠೀಕಾಗಿ ಬಂದು ಸಂತನ ಸಮೀಪ ಕುದುರೆಯನ್ನು ನಿಲ್ಲಿಸುತ್ತಾನೆ. ಸಂತ ಇದ್ಯಾವುದನ್ನೂ ಲೆಕ್ಕಿಸದೆ ತನ್ನ ಗಂಜಿಯನ್ನೇ ಸವಿಯುತ್ತಿರುತ್ತಾನೆ. ಈ ಸೂಫಿಯ ಸ್ಥಿತಿಯನ್ನು ಕಂಡು ಮರುಕಗೊಂಡ ಮಂತ್ರಿ ಹೀಗೆ ಹೇಳುತ್ತಾನೆ: "ಅಯ್ಯಾ ಮಹಾತ್ಮ, ನಿನ್ನ ಸ್ಥಿತಿ ನೋಡಿ ನನಗೆ ಮರುಕ ಹುಟ್ಟುತ್ತಿದೆ. ಈ ದೇಶದ ಮಹಾರಾಜನ ಸ್ನೇಹ ಸಂಪಾದಿಸಿದ್ದರೆ, ನಿನಗೆ ಮರದ ಕೆಳಗೆ ಕುಳಿತು ಮುರುಕು ಪಾತ್ರೆಯಿಂದ ಗಂಜಿ ಕುಡಿಯುವ ಸ್ಥಿತಿ ಬರುತ್ತಿರಲಿಲ್ಲ." ಆಗ ಸೂಫಿ ಸಂತ ಹೇಳುತ್ತಾನೆ, "ಅಯ್ಯಾ ಮಂತ್ರಿ, ಮರದ ಕೆಳಗೆ ಕುಳಿತು ಮುರುಕು ಪಾತ್ರೆಯಿಂದ ಗಂಜಿ ಕುಡಿಯುವುದನ್ನು ನೀನು ಕಲಿತಿದ್ದರೆ ಆ ಮಹಾರಾಜನ ಸಹವಾಸ ಮಾಡುವ ಪರಿಸ್ಥಿತಿಯೇ ನಿನಗೆ ಬರುತ್ತಿರಲಿಲ್ಲ."

ಮತ್ತೊಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು. ಅದೇನೆಂದರೆ, ಅಂತರಂಗದ ಶ್ರೀಮಂತಿಕೆಯನ್ನು ಬಯಸುವವರೆಲ್ಲರೂ ಸಾಮಾನ್ಯವಾಗಿ ತಮ್ಮ ಬಾಲ್ಯವನ್ನು ಕೊರತೆಗಳಿಲ್ಲದ ಪರಿಸರದಲ್ಲಿ ಕಳೆದವರು. ಇವರ ಎಳೆಯ ಮನಸ್ಸಿನ ಮೇಲೆ ಬಡತನದ ಬೇಗೆಯ ಕರಾಳ ಛಾಯೆ ಬಿದ್ದಿರಲಿಲ್ಲ. ಹೀಗಾಗಿ ಅಂತರಂಗದ ಸಿರಿತನವನ್ನು ಅನುಭವಿಸಲು ಇವರಿಗೆ ಯಾವ ಅಡಚಣೆಗಳೂ ಇರುವುದಿಲ್ಲ. ಹೀಗಾಗಿ ಇಂಥವರಲ್ಲಿ ಅನೇಕರು ಶ್ರೇಯಸ್ಸನ್ನು ಆರಿಸಿಕೊಳ್ಳುತ್ತಾರೆ. ಆನುವಂಶೀಯ ಗುಣ ಅಥವಾ ಸಂಸ್ಕಾರಗಳ ಪ್ರಭಾವ ಈ ವಿದ್ಯಮಾನದಲ್ಲಿ ಪ್ರಭಾವ ಬೀರಿ ಮೇಲಿನ ಆಯ್ಕೆಯಲ್ಲಿ ಗಮನಾರ್ಹ ಪಾತ್ರವನ್ನು ವಹಿಸುತ್ತದೆ.

**ಬಡತನ ತರುವ ದೈನ್ಯ ಸ್ಥಿತಿ ಎಂತಹ ಸದೃಢವಾದ ಮನಸ್ಸನ್ನೂ ಕುಗ್ಗಿಸಿಬಿಡುತ್ತದೆ. ಧೈರ್ಯವಂತರು ಕೂಡ ಪರಿಸ್ಥಿತಿಯ ಒತ್ತಡಗಳಿಗೆ ಮಣಿದು, ತಮ್ಮ ಆದರ್ಶಕ್ಕಾಗಿ ನಿಲುವ ಛಲವನ್ನು ಬಿಟ್ಟುಬಿಡುವುದೇ ಹೆಚ್ಚು. ಹಾಗಾಗಿ ವ್ಯಕ್ತಿ ತನ್ನ ಆತ್ಮಗೌರವವನ್ನು ಕಳೆದುಕೊಳ್ಳುತ್ತಾನೆ, ಶ್ರೇಷ್ಠತೆಯನ್ನು ತ್ಯಜಿಸುತ್ತಾನೆ. ಸಾವಿಗೂ ಹೆದರದೆ ತಮ್ಮ ಚಾರಿತ್ರ್ಯವನ್ನು ಉಳಿಸಿಕೊಳ್ಳುವವರು ಎಲ್ಲೋ ಕೆಲವರು ಮಾತ್ರ. ಆದರೆ ಬಹುಸಂಖ್ಯಾತ ಜನ ಮೂಲತಃ ಒಳ್ಳೆಯವರೇ ಆದರೂ, ಬಡತನದ ಬೇಗೆ ಅವರನ್ನು ಚಾರಿತ್ರ್ಯಹೀನ ವ್ಯಕ್ತಿಗಳನ್ನಾಗಿ ಮಾಡಿಬಿಡುತ್ತದೆ.**

ಬಡತನದ ಒತ್ತಡಗಳಿಂದ ಮೂಡಿದ ಮನಸ್ಸುಗಳ ಗುಂಪು ನಡವಳಿಕೆಯ ಬಗ್ಗೆ ಸಂಶೋಧನೆಗಳು ನಡೆದಿವೆ. ಈ ಗುಂಪು ನಡವಳಿಕೆಗಳು ಸಾಮಾನ್ಯವಾಗಿ ಇತರರ ಗಮನ ಸೆಳೆಯಲು ತೋರುವ ನಡವಳಿಕೆಗಳಾಗಿರುತ್ತವೆ. ಅಥವಾ ತಮ್ಮನ್ನು ನಿಕೃಷ್ಟವಾಗಿ ಕಂಡವರಿಂದ ಮನ್ನಣೆ ಗಳಿಸುವ ಪ್ರಯತ್ನಗಳಾಗಿರಲೂ ಸಾಕು. ಜೊತೆಗೆ ಬಡತನ ತರುವ ಅಭದ್ರತೆಯ ಅಳಲು ನಕಾರಾತ್ಮಕ ಗುಂಪು ನಡವಳಿಕೆಯಾಗಿ ಪರಿಣಮಿಸಬಹುದು. ಇಂತಹ ಗುಂಪುಗಳನ್ನು ಮುನ್ನಡೆಸುವ ಉತ್ತಮವಾದ ನಾಯಕ ಇದೇ ಗುಂಪಿನಿಂದ ಬಂದವನಾಗಿದ್ದು, ಸಕಾರಾತ್ಮಕ ಪರಿಣಾಮಗಳಾಗುವಂತೆ ಅದಕ್ಕೆ ಮಾರ್ಗದರ್ಶನ ಮಾಡುತ್ತಾನೆ. ಆದರೆ ಸಾಮಾನ್ಯವಾಗಿ ಈ ಬಗೆಯ ಗುಂಪುಗಳಿಗೆ ನಾಯಕತ್ವದ ಕೊರತೆಯಿದೆ. ಹಾಗಾಗಿ ಸಾಮಾನ್ಯವಾಗಿ ಇಂದಿನ ಸತ್ಯಾಗ್ರಹಗಳು 'ಬಡವರ ಕೂಗು' ಎಂದು ಭಾವಿಸಬಹುದಾದರೂ ನಾಯಕತ್ವದ ಕೊರತೆಯಿಂದಾಗಿ ಅವು ವಿನಾಶಕಾರಿಯಾಗುತ್ತವೆ. ಸಾರ್ವಜನಿಕ ಆಸ್ತಿಯ ವಾರಸುದಾರರಾದವರು ನಿಜವಾದ ಅರ್ಥದಲ್ಲಿ ಬಡವರೇ ಆದರೂ, ಅದನ್ನು ನಿಯಂತ್ರಣವಿಲ್ಲದ ಈ ಗುಂಪುಗಳು ಹಾಳು ಮಾಡುವುದುಂಟು. ಇವೆಲ್ಲ ನಡವಳಿಕೆಗಳು ಶ್ರೇಷ್ಠ ವ್ಯಕ್ತಿಚಿತ್ರದ ಅಭಾವವನ್ನು ಸೂಚಿಸುತ್ತವೆ. ಬಡತನದಿಂದಾಗಿ ಮಾನಸಿಕ ಖಿನ್ನತೆ ಉಂಟಾಗುತ್ತದೆ. ಜೊತೆಗೆ ವೈಚಾರಿಕ ಬೆಳವಣಿಗೆಯೂ ಕುಗ್ಗುತ್ತದೆ.

ವ್ಯವಸ್ಥೆಯ ನ್ಯೂನತೆಗಳಲ್ಲಿ ಸಾಮಾಜಿಕ ಬಡತನಕ್ಕೆ ಕಾರಣವನ್ನು ಹುಡುಕುವುದುಂಟು. ಅಮೇರಿಕಾದಂತಹ ದೇಶದಲ್ಲೂ ಬಡವರಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ಅಮೇರಿಕಾದ ಕೆಲವು ಜನರು ಬಡತನಕ್ಕೆ ಬಡವರೇ ಕಾರಣ ಎಂದು ಆಪಾದಿಸುತ್ತಾರೆ. ಇವರಲ್ಲಿ ಬಹುಸಂಖ್ಯಾತರು ಸ್ಥಿತಿವಂತರು ಎಂದು ಬೇರೆ ಹೇಳಬೇಕಾಗಿಲ್ಲ. ಇವರ ಪ್ರಕಾರ ಕುಡಿತದ ವ್ಯಸನದಿಂದ, ಶಿಸ್ತಿನ ಅಭಾವದಿಂದ ಜನ ಬಡವರಾಗಿದ್ದಾರೆ. ಆದರೆ ಇದೇ ಸಮಾಜದ ಕೆಳವರ್ಗದ ಜನ ಹೇಳುವುದೇನೆಂದರೆ, ಕಳಪೆ ಶಾಲೆಗಳಿಂದಾಗಿ ಒಳ್ಳೆಯ ಶಿಕ್ಷಣವಿಲ್ಲದೆ, ಒಳ್ಳೆಯ ಸವಲತ್ತುಗಳಿಲ್ಲದೆ ಜನ ಬಡವರಾಗುತ್ತಾರೆ.

ಬಡತನದ ಸಮಸ್ಯೆಗೆ ನಿಜವಾದ ಉತ್ತರ ಈ ಎರಡರ ನಡುವೆ ಎಲ್ಲೋ ಇದೆ ಎಂದೆನಿಸುತ್ತದೆ. ಸದ್ಯದ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳಾದರೆ ಭಾರತದಂತಹ ರಾಷ್ಟ್ರಗಳಲ್ಲಿ ಬಡತನ ಈಗಿರುವುದಕ್ಕಿಂತ ಕಡಮೆಯಾಗುತ್ತದೆ. ಬಡತನದ ದುಷ್ಪರಿಣಾಮ ಈ ದೇಶದ ಸ್ತ್ರೀಯರ ಮೇಲೆ ಮತ್ತು ಮಕ್ಕಳ ಮೇಲೆ ತೀವ್ರವಾಗಿ ಕಾಣಿಸಿಕೊಳ್ಳುತ್ತಿದೆ. ನಮ್ಮ ದೇಶದ ವಯಸ್ಕ ಸ್ತ್ರೀಯರ ಸಾಕ್ಷರತೆಯನ್ನು ಗಮನಿಸಿದರೆ, ಅದು ಆಫ್ರಿಕಾದ ಮಹಿಳೆಯರ ಸ್ಥಿತಿಗತಿಗಳಿಗಿಂತ ಹೀನವಾಗಿದೆ.

ಹಾಗೆಯೇ ಹಿಂದುಳಿದ ರಾಜ್ಯಗಳಾದ ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶಗಳಂತಹ ರಾಜ್ಯಗಳಲ್ಲಿ ಮಕ್ಕಳ ಪರಿಸ್ಥಿತಿ ಆಫ್ರಿಕಾದ ಅತ್ಯಂತ ಹಿಂದುಳಿದ ದೇಶಗಳ ಮಕ್ಕಳ ಪರಿಸ್ಥಿತಿಗಿಂತ ತೀರಾ ಭಿನ್ನವೇನಲ್ಲ. ಸ್ತ್ರೀಭ್ರೂಣ ಹತ್ಯೆ, ಸ್ತ್ರೀಯರ ಆರೋಗ್ಯದ ದುಃಸ್ಥಿತಿ, ಮಕ್ಕಳ ಘೋರ ಕಡೆಗಣನೆ – ಇವೆಲ್ಲಾ ಬಡತನದ ಘೋರ ಪರಿಣಾಮಗಳು. MMR ಅಥವಾ ಪ್ರಸವ ಸಮಯದಲ್ಲಿ ಸಂಭವಿಸುವ ಸಾವುಗಳ ಸಂಖ್ಯೆ ಭಾರತದ ಆರೋಗ್ಯ ವ್ಯವಸ್ಥೆ ನಾಚಿಕೆಯಿಂದ ತಲೆತಗ್ಗಿಸುವಷ್ಟು ಅಧಿಕವಾಗಿದೆ. ಈ ಘೋರ ಸಾಮಾಜಿಕ ಅನ್ಯಾಯಗಳಿಗೆ ಕಾರಣವಾಗುವ ಬಡತನವನ್ನು ಹೋಗಲಾಡಿಸುವುದು ಅಭಿವೃದ್ಧಿಶೀಲ ಭಾರತದಲ್ಲಿ ಬಹಳ ಮುಖ್ಯ. ★